ಬೌಂಡರಿ ಮಾಡಬಾರದು, ಹಳೆ ಬೌಂಡರಿಯಲ್ಲಿ ಕೊಡುವುದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ಭಾರತ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಇವರಿಗೆ ನಾವು ಕಬ್ಬಿಣದ ಅದಿರನ್ನು ಸಾಗಾಣಿಕೆ ಮಾಡಲು ಅವಕಾಶವನ್ನು ಕೊಡಲೇಬೇಕು. ಫಾರೆಸ್ಟ್‌ನವರಿಗೂ ನಾವು ಹೇಳಿದ್ದೇವೆ. ಆದಷ್ಟುಬೇಗ ಆ ಬೌಂಡರಿ ಸಮಸ್ಯೆಯನ್ನು ಕ್ಲಿಯರ್ ಮಾಡಲಿಕ್ಕೆ ಹೇಳಿದ್ದೇವೆ, ಅವರು ಬಂದು ನನ್ನನ್ನು ಭೇಟಿ ಮಾಡಿದ್ದರು. ಆದಷ್ಟುಬೇಗ ಇದನ್ನು ಕ್ಲಿಯರ್ ಮಾಡಿ ಅರಣ್ಯ ಇಲಾಖೆಯ ಮೂಲಕವೇ ತಕ್ಷಣ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಇದಕ್ಕೆ ಏನು ಸಹಾಯ ಬೇಕೋ ಅದನ್ನು ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ನಾನು ಮಾಡಿಸಿಕೊಡುತ್ತೇನೆ. ಆ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ.

ಈ) ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿಶ್ವವಿಖ್ಯಾತ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವೆಂದು ಹೆಸರಿಟ್ಟು ಶಿಲಾನ್ಯಾಸ ಮಾಡುವ ಬಗ್ಗೆ.

ಶ್ರೀ ಎನ್. ಸಂಪಂಗಿ : ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿಶ್ವವಿಖ್ಯಾತ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವೆಂದು ಹೆಸರಿಟ್ಟು ಶಿಲಾನ್ಯಾಸ ಮಾಡುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸರ್ಕಾರವು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಚಿಕ್ಕಬಳ್ಳಾಪುರ ಜಿಲ್ಲೆಯ ಸರ್. ಎಂ.ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದಂಥ ಮುದ್ದೇನಹಳ್ಳಿಯಲ್ಲಿ 200 ಎಕರೆ ವಿಸ್ತೀರ್ಣದಲ್ಲಿ ಒಂದು ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಿದ್ದು ಆ ಸಂಸ್ಥೆಗೆ ಸರ್.ಎಂ.ವಿಶ್ವೇಶ್ವರಯ್ಯನವರ ಗೌರವಾರ್ಥ Vishweshwaraiah Institute of Advanced Technology

(VIAT) ಎಂದು ಹೆಸರಿಡಲಾಗಿದೆ. ಈಗಾಗಲೇ ಬೆಳಗಾವಿಯಲ್ಲಿ ಸ್ಥಾಪಿತವಾಗಿರುವ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿಶ್ವೇಶ್ವರಯ್ಯನವರ ಹೆಸರನ್ನೇ ಇಡಲಾಗಿದೆ. ಮುದ್ದೇನಹಳ್ಳಿಯಲ್ಲಿ ಈಗ ಸ್ಥಾಪಿತವಾಗಿರುವಂಥ ಕೇಂದ್ರವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸೇರಿದೆ.

ಶ್ರೀ ಎನ್. ಸಂಪಂಗಿ : ನಾವು ಕೂಡ ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಬಂದಂಥವರು. ವಿಶ್ವೇಶ್ವರಯ್ಯನವರು ಹುಟ್ಟಿದ ಸ್ಥಳ, ಮುದ್ದೇನಹಳ್ಳಿಯಲ್ಲಿ ಹುಟ್ಟಿದಂಥ ವಿಶ್ವೇಶ್ವರಯ್ಯನವರ ಹೆಸರು ಸರ್.ಎಂ. ವಿಶ್ವೇಶ್ವರಯ್ಯ ಅಥವಾ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಎಂದು ಹೇಳುತ್ತಾರೆ. ಇವರು ಅದಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಎಂದು ಇಟ್ಟರೆ ಯಾವ ವಿಶ್ವೇಶ್ವರಯ್ಯ ಎಂದಾಗುತ್ತದೆ? ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಎಂದರೆ ಏನು ಅರ್ಥವಿದೆ. ಅವರ ಹೆಸರಿಗೆ ಅಗೌರವ ತರತಕ್ಕಂಥ ವಿಶ್ವೇಶ್ವರಯ್ಯ, ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಎಂದು ಹೆಸರಿಡಲಿಕ್ಕೆ ಏನು ತೊಂದರೆಯಾಗಿತ್ತು? ಬೆಳಗಾವಿಯಲ್ಲಿ ಕೇವಲ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಂದರೆ ಯಾವ ವಿಶ್ವೇಶ್ವರಯ್ಯ? ಎಲ್ಲಿನ ವಿಶ್ವೇಶ್ವರಯ್ಯ ? ಭಾರತರತ್ನ, ಮೋಕ್ಷಗುಂಡಂ ಎಲ್ಲಿ ಹೋಯಿತು ಅದು? ವಿಶ್ವೇಶ್ವರಯ್ಯ ಅಂದರೆ ಯಾರು? ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಎಂದು ಹೆಸರಿಡಿ.

ಅಧ್ಯಕ್ಷರು : ಸರ್.ಎಂ.ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಎಂದು ಇಡಬೇಕು.

ಶ್ರೀ ಎನ್. ಸಂಪಂಗಿ : ಇದಕ್ಕೆ ಉತ್ತರ ಕೊಡಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೇ, ಬೆಳಗಾವಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾದಂಥ ಸಂದರ್ಭದಲ್ಲಿ ಹಿಂದೆ ಇಲ್ಲಿ ಬಿಲ್ ಪಾಸ್ ಆದಂಥ ಸಂದರ್ಭದಲ್ಲಿ ಒಂದು Act pass ಆಗಿತ್ತು. ಅದರಲ್ಲಿ ಸರ್.ವಿಶ್ವೇಶ್ವರಯ್ಯನವರು ಎಂದು ಹೆಸರಿಟ್ಟಿದ್ದಾರೆ. ಮಾನ್ಯ ಸಂಪಂಗಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಿಶ್ಚಿತವಾಗಿ ಆ Act ಗೆ amendment ತಂದು ಇದೇ ಸದನದಲ್ಲಿ ಪಾಸ್ ಮಾಡಿ ಆ ಹೆಸರನ್ನೇ ಇಡುತ್ತೇನೆ.

ಶ್ರೀ ಎನ್. ಸಂಪಂಗಿ : ಇದೇ ಸದನದಲ್ಲಿ ಅದನ್ನು ತರಬೇಕು.